ಆರ್ಥಿಕ ಆಮಿಷಗಳೂ ಪ್ರೇರಕವಾಗಿದ್ದವು. ಬಾಲಕಿಗೆ ವಧುದಕ್ಷಿಣೆ ನೀಡಿ ಮದುವೆಯಾಗಲು 'ಕೋಣ'ದಂಥ ವರಗಳು ಮುಂದೆ ಬರುತ್ತಿದ್ದರು.

ನೊಜೂಮ್ ಹೊಳಪು ಕಂಗಳ ಬಾಲಕಿ. ಅವಳ ದೃಷ್ಟಿಯಲ್ಲಿ ಮದುವೆ ಎಂದರೆ ಸೊಗಸಾದ ಬಿಳಿಯ ಫ್ರಾಕ್ ತೊಡುವುದು. ತನ್ನಿಷ್ಟದ ಬೊಂಬೆ ಕೊಳ್ಳುವ ಸ್ವಾತಂತ್ರ್ಯ ಪಡೆಯುವುದು. ತನಗೂ ಮದುವೆ ಎಂದು ಗೊತ್ತಾದಾಗ ಆ ಮುಗ್ಧತೆಯಲ್ಲಿಯೇ ಅದನ್ನು ಅವಳು ಸಂಭ್ರಮಿಸುತ್ತಾಳೆ. ಬಹುಶಃ ಖದಿಜಾ ತಮ್ಮದೇ ಅನುಭವವನ್ನು ನೊಜೂಮ್ ಪಾತ್ರಕ್ಕೆ ಹಾಕಿರುವುದು ಈ ಮುಗ್ಧತೆಗೆ ಸಹಜ ಚೌಕಟ್ಟನ್ನು ಒದಗಿಸಿಕೊಟ್ಟಿದೆ. ಮದುವೆಯನ್ನು ಸಿನಿಮಾ ತರಾತುರಿಯಲ್ಲಿ ತೋರಿ, ಮುಗಿಸುವುದಿಲ್ಲ. ಮಗುವಿನ ದೃಷ್ಟಿಕೋನದಿಂದಲೇ ಭಾವದಲೆಗಳ ಎಬ್ಬಿಸುತ್ತಾ, ನಿರೀಕ್ಷೆಗಳು ಹುಸಿಯಾಗತೊಡಗುವ ಲಕ್ಷಣಗಳನ್ನು ಅತಿ ಸಾವಧಾನದಿಂದ ಹಿಡಿದಿದೆ. ಅವಳಿಗೆ ಆಟವಾಡುವ ತವಕ. ಮನೆಯವರಿಗೆ ಮದುವೆಯನ್ನು ಮುಗಿಸಿಬಿಡುವ ಧಾವಂತ. ಬಾಲಕಿಗೆ ವಿವಾಹ ಆಗುವಂತೆ ಮನಃಪರಿವರ್ತನೆ ಮಾಡುವ ಕ್ರೌರ್ಯವನ್ನು ಚಿತ್ರ ಸೂಕ್ಷ್ಮಪ್ರಜ್ಞೆಯಿಂದ ತೋರುತ್ತದೆ. ಕೃತ್ರಿಮಗಳು ನಮಗೆ ಸಹಜವಾಗಿ ಕಾಣುತ್ತಾ ಹೋಗುತ್ತವೆಯೇ ವಿನಾ ವಾಚ್ಯ ಎನಿಸುವುದಿಲ್ಲ.

ಮೊದಲ ರಾತ್ರಿಯಲ್ಲಿಯೇ ಬಾಲಕಿಯ ಮೇಲೆ ಗಂಡನಿಂದ ನಡೆಯುವುದು ಅತ್ಯಾಚಾರ. ಅದನ್ನು ತೋರುವಲ್ಲಿ ಬಳಸಿರುವ ಪ್ರತಿಮೆಗಳು ಚಿತ್ರದ ಉದ್ದೇಶ ಮುಕ್ಕಾಗದಿರಲಿ ಎಂದು ಎಚ್ಚರ ವಹಿಸಿರುವುದಕ್ಕೆ ಸಾಕ್ಷಿಯಂತಿವೆ. ಹಾಗೆಂದು ಅವರು ಓಬೀರಾಯನ ಕಾಲದ 'ದರ್ಶನ ತಂತ್ರ'ವನ್ನು ನೆಚ್ಚಿಕೊಳ್ಳುವುದಿಲ್ಲ. ವ್ಯಕ್ತಗೊಳ್ಳುವ ದೃಶ್ಯಗಳು ಸಹಜ ಎಂದೇ ಅನ್ನಿಸುತ್ತವೆ.

ವಿವಾಹಾನಂತರ ಮನೆಯಲ್ಲಿ ಅತ್ತೆಯು ಬಾಲಕಿಯನ್ನು ಕೆಲಸ ಮಾಡಲು ಪುಸಲಾಯಿಸುವುದು, ಅದಕ್ಕೆ ನೊಜೂಮ್‌ಳಿಂದ ಹೊಮ್ಮುವ ಬಾಲ್ಯ ಸಹಜ ಪ್ರತಿರೋಧ, ಗಂಡ ಆಡುವ ನಾಟಕಗಳು, ಆಮೇಲೆ ಅವನೇ ಪೀಕಲಾಟಕ್ಕೆ ಸಿಲುಕುವ ಪರಿ ಎಲ್ಲವೂ ಬಾಲಕಿ

